ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

ಸಿ.ಸಿ.ನಂಃ348ಃ 2018

ಪಿಡಬ್ಲ್ಯು- 20

ಸಿಡಬ್ಲ್ಯು-

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನವೀನ್‌ಕುಮಾರ್ |
| ತಂದೆಯ ಹೆಸರು | ಃ | ತಿಮ್ಮಯ್ಯ |
| ವಯಸ್ಸು | ಃ | 42 ವರ್ಷ |
| ವೃತ್ತಿ | ಃ | ಡಿಸಿಸಿ ಬ್ಯಾಂಕ್‌ನ ಹಿರಿಯ ಸಹಾಯಕ, ಮಡಿಕೇರಿ |
| ವಾಸಸ್ಥಳ | ಃ | ಕುಶಾಲನಗರ |

ದಿನಾಂಕಃ 30.08.2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ. ಎಪಿಪಿಯವರಿಂದಃ-

ನಾನು ಮಡಿಕೇರಿಯ ಡಿಸಿಸಿ ಬ್ಯಾಂಕ್‌ನಲ್ಲಿ ಸುಮಾರು 1999 ರಿಂದ ಹಿರಿಯ ಸಹಾಯಕನಾಗಿ ಕೆಲಸ ಮಾಡಿರುತ್ತಿರುತ್ತೇನೆ. 2017ನೇ ಇಸವಿಯಲ್ಲಿ ನಾನು ಡಿಸಿಸಿ ಬ್ಯಾಂಕಿನ ಮಡಿಕೇರಿಯ ಹಿರಿಯ ಮೇಲ್ವಿಚಾರಕನಾಗಿ ಕೆಲಸ ಮಾಡುತ್ತಿದ್ದೆ. ನಾನು ಈ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಯು 2017 ಇಸವಿಯ ಮಲ್ದಾರೆಯ ಕೃಷಿ ಸಹಕಾರ ಪತ್ತಿನ ದಸ್ತಾನು ದಾಖಲೆ ಆಗಿರುತ್ತದೆ. ಸದರಿ ದಾಖಲಿಗೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯನ್ನು ನಿಪಿ-35 ಅದರಲ್ಲಿರುವ ಸಾಕ್ಷಿಯನ್ನು ನಿಪಿ-35 ಎ ಗುರುತಿಸಲಾಯಿತು. ನಾನು ಹಾಜರುಪಡಿಸಿರುವ ದಾಖಲೆಯು 31.3.2017ರಲ್ಲಿ ಮಲ್ದಾರೆಯ ಕೃಷಿ ಸಹಕಾರ ಪತ್ತಿನ ದಾಸ್ತಾನು ತಕ್ತೆಯಲ್ಲಿ 104 ಚೀಲ ಕರಿಮೆಣಸು ಕಡಿಮೆಯಾಗಿರುವ ಬಗ್ಗೆ ದಾಖಲೆಯಾಗಿರುತ್ತದೆ. 104 ಚೀಲ ಕರಿಮೆಣಸು ಕಡಿಮೆಯಾಗಿರುವ ಬಗ್ಗೆ ನಮಗೆ ಕೇಂದ್ರ ಕಚೇರಿಯಿಂದ ಮಾಹಿತಿ ಬಂದಿರುತ್ತದೆ.

ನಂತರ ನಾವು ಘಟನಾ ಸ್ಥಳಕ್ಕೆ ಹೋಗಿ ದಾಖಲೆಗಳನ್ನು ಮತ್ತು ದಸ್ತಾನನ್ನು ಪರಿಶೀಲನೆ ಮಾಡಿರುತ್ತೇವೆ. ಸದರಿ ದಾಸ್ತಾನಿನ 104 ಚೀಲ ಖೋತ ಕಂಡುಬಂದಿರುತ್ತದೆ. ಅದರಲ್ಲಿ 4 ಚೀಲ ಬಶೀರ್ ಅವರಿಗೆ ಸೇರಿದ್ದು ಉಳಿದ 100 ಚೀಲ ಶಿವು ಅವರಿಗೆ ಸೇರಿರುತ್ತದೆ. ಅನಂತರ 1ನೇ ಆರೋಪಿಯು ಸದರಿ ದಸ್ತಾನನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಮಾಹಿತಿ ಬಂದಿರುತ್ತದೆ. ಆ ಬಗ್ಗೆ ನಿಪಿ-35 ರಂತೆ ವರದಿಯನ್ನು ನೀಡಿರುತ್ತೇನೆ.

ಪಾಟಿ ಸವಾಲು : ಶ್ರೀ ಡಿಸಿಡಿ ವಕೀಲರಿಂದ

ನಾನು ಮಲ್ದಾರೆ ಕೃಷಿ ಸಹಕಾರ ಪತ್ತಿನ ನೌಕರನೆಂದರೆ ಸರಿ. ನಾನು ಜಿಲ್ಲಾ ಡಿಸಿಸಿ ಬ್ಯಾಂಕಿನ ಮೇಲಾಧಿಕಾರಿಯಾಗಿರುವುದರಿಂದ ಜಿಲ್ಲಾದ್ಯಂತ ಇರುವ ಬ್ಯಾಂಕುಗಳ ಮೇಲು ಉಸ್ತುವಾರಿ ಮಾಡುವ ಉದ್ದೇಶದಿಂದ ಸದರಿ ಮಲ್ದಾರೆ ಕೃಷಿ ಸಹಕಾರ ಪತ್ತಿನ ಬ್ಯಾಂಕಿಗೆ ಹೋಗಿರುತ್ತೇನೆ. ನಾನು ಮಲ್ದಾರೆಯಲ್ಲಿರು ಕೃಷಿ ಸಹಕಾರ ಪತ್ತಿನ ಬ್ಯಾಂಕಿಗೆ ತಿಂಗಳಿಗೆ 3-4 ಬಾರಿ ಭೇಟಿ ನೀಡಿರುತ್ತೇನೆ. ನಾನು ಸುಮಾರು 2015 ಇಸವಿಯಿಂದ ಆ ರೀತಿ ಭೇಟಿ ಮಾಡುತ್ತಿದ್ದೇನೆ. ನಾನು ಮಾಲ್ದರೆಯಲ್ಲಿರುವ ಕೃಷಿ ಸಹಕಾರ ಪತ್ತಿನ ಬ್ಯಾಂಕಿನಲ್ಲಿ ನಡೆಯು ಸಭೆಗಳಿಗೆ ನಾನು ಹೋಗುವುದಿಲ್ಲ. ನಾನು ಸದರಿ ಬ್ಯಾಂಕಿಗೆ ಹಣದ ವಿಚಾರವಾಗಿ ಮತ್ತು ದಾಸ್ತಾನು ವಿಚಾರವಾಗಿ ಸರಕಾರದಿಂದ ಬರುವ ಅನುದಾನಗಳನ್ನು ನೀಡುವ ಸಲುವಾಗಿ ಬ್ಯಾಂಕಿಗೆ ಭೇಟಿ ನೀಡಿರುತ್ತೇನೆ. ಸದರಿ ಬ್ಯಾಂಕಿನಲ್ಲಿ ಗೊಬ್ಬರ, ಕರಿಮೆಣಸು, ಕಾಫಿ, ಚಿನ್ನ ಆಭರಣಗಳನ್ನು ಮತ್ತು ಸದರಿ ಬ್ಯಾಂಕಿನಲ್ಲಿ ನ್ಯಾಯಾಬೆಲೆ ಅಂಗಡಿ ಇದೆ ಎಂದರೆ ಸರಿ. ಸದರಿ ಬ್ಯಾಂಕಿನ ಆಡಳಿತ ವ್ಯವಹಾರದ ಬಗ್ಗೆ ನನ್ನ ಗಮನಕ್ಕಿದೆ ಎಂದರೆ ಸರಿ. ಸದರಿ ಬ್ಯಾಂಕಿನಲ್ಲಿ 2016-17 ಇಸವಿಯಲ್ಲಿ ನಡೆದಿರುವ ವಾರ್ಷಿಕ ಮಹಾಸಭೆಯ ಬಗ್ಗೆ ಮತ್ತು ವರದಿಯ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿ. ಚಾಸಾ-2 ರವರು ಮಲ್ದಾರೆಯ ಕೃಷಿ ಸಹಕಾರ ಸಂಘದ ಸಿಇಓ ಆಗಿದ್ದಾರೆ ಎಂದರೆ ಸರಿ.

ದಿಃ 31.3.2017 ರಲ್ಲಿ ನಡೆದ ದಾಸ್ತಾನು ಪರಿಶೀಲನೆ ಸಮಯಲ್ಲಿ 648 ಚೀಲ ಗೊಬ್ಬರ ಅಂದರೆ ಸುಮಾರು 4 ಲಕ್ಷದ 8,008/- ಮೌಲ್ಯದ ಗೊಬ್ಬರ ಖೋತ ಆಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ. ನಾನು ನೀಡಿರುವ ನಿಪಿ-35 ರಲ್ಲಿ 2017 ನೇ ಇಸವಿಯಲ್ಲಿ ಗೊಬ್ಬರ ಖೋತವಾಗಿರುವ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ ಅದರ ಬಗ್ಗೆ ನಾನು ಬೇರೆ ವರದಿಯನ್ನು ನೀಡಿರುತ್ತಾರೆ ಎಂದರೆ ಸರಿ. 31.3.2017ನೇ ಇಸವಿಯಲ್ಲಿ 104 ಚೀಲ ಕರಿಮೆಣಸು ಖೋತ ಆಗಿರುವ ಬಗ್ಗೆ ನಾನು ಮೊದಲ ಬಾರಿಗೆ ಚಾಸಾ-2 ರವರಿಗೆ ಸಿಇಓ ಅವರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಅದೇ ರೀತಿ ಆ ಸಮಯದಲ್ಲಿ ರಸಗೊಬ್ಬರ ಖೋತ ಆಗಿರುವ ಬಗ್ಗೆ ವರದಿಯನ್ನು ಚಾಸಾ-2 ಮತ್ತು ಸಿಇಓ ಅವರಿಗೆ ನೀಡಿದ್ದೇನೆ ಎಂದರೆ ಸರಿ. 2016-17ನೇ ಇಸವಿಯಲ್ಲಿ ಮಲ್ದಾರೆ ಕೃಷಿ ಸಹಕಾರ ಪತ್ತಿನ ದಾಸ್ತಾನು ಸದರಿ ಬ್ಯಾಂಕಿನಲ್ಲಿ ಖೋತ ಆಗಿರುವ ರಸಗೊಬ್ಬರ, ಕರಿಮೆಣಸು ಮತ್ತು ಇತರೆ ಅಂಶಗಳಲ್ಲಿ ವ್ಯತ್ಯಾಸ ಕಂಡುಬಂದರೆ ಅದಕ್ಕೆ ಸಿಇಓ ಚಾಸಾ-2 ರವರು ಹೊಣೆಗಾರರ ಎಂದು ವರದಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ದಾಸ್ತಾನಿನಲ್ಲಿ ಖೋತ ಕಂಡು ಬಂದರೆ ಅದಕ್ಕೆ ಯಾರು ಹೊಣೆಗಾರರು ಎಂದು ತಿಳಿಸುವ ಜವಾಬ್ದಾರಿ ನನ್ನದಲ್ಲ ಸಾಕ್ಷಿ ನುಡಿಯುತ್ತಾರೆ.

ಮಲ್ದಾರೆ ಕೃಷಿ ಸಹಕಾರ ಪತ್ತಿನ ಬ್ಯಾಂಕಿನಲ್ಲಿ ಚಾಸಾ-2 ರವರಿಗೆ ಪ್ರತ್ಯೇಕವಾದ ಕೊಠಡಿ ವ್ಯವಸ್ಥೆ ಇದೆ ಎಂದರೆ ಸರಿ. ಸದರಿ ಬ್ಯಾಂಕಿನ ಸಂಪೂರ್ಣ ಮೇಲು ಉಸ್ತುವಾರಿ ಚಾಸಾ-2 ರವರಿಗೆ ಸಂಬಂದಿಸಿರುತ್ತದೆ ಎಂದರೆ ಸರಿ. ಸದರಿ ಬ್ಯಾಂಕಿನಲ್ಲಿರುವ ಗೋಡನ್‌ಗಳ ಕೀ ಯನ್ನು ಆರೋಪಿ 1 ರವರು ಗೋಡಾನ್‌ಗಳನ್ನು ಮುಚ್ಚುವ ಮತ್ತು ತೆಗೆಯು ಸಮಯಲ್ಲಿ ಚಾಸಾ-2 ರವರಿಂದ ಪಡೆದುಕೊಂಡು ನಂತರ ಚಾಸಾ-2 ರವರ ಕೈಗೆ ಕೊಟ್ಟು ಹೋಗುತ್ತಾನೆ ಎಂದರೆ ಸಾಕ್ಷಿ ಅದರ ಬಗ್ಗೆ

ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಿಃ 31.3.2017 ಕ್ಕಿಂತ ಮುಂಚೆ ಇದ್ದ ಬ್ಯಾಂಕಿನ ಅಧ್ಯಕ್ಷರಾದ ಚಾಸಾ-1 ರವರಿಗೆ ದಾಸ್ತಾನು ಖೋತ ಆಗಿರುವ ಬಗ್ಗೆ ಮಾಹಿತಿ ಇತ್ತ ಇಲ್ಲವ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ದಿಃ 31.1.2017 ರಂದು ಕರಿಮೆಣಸು, ಕಾಫಿ ಮತ್ತು ಚಿನ್ನಾಭರಣಗಳನ್ನು ಮತ್ತು ರಸಗೊಬ್ಬರವನ್ನು ಪರಿಶೀಲನೆ ಮಾಡಿರುತ್ತೇವೆ. ಪ್ರತಿ ತಿಂಗಳ ಕೊನೆಯ ದಿನ ಬ್ಯಾಂಕಿನ ಸಿಇಓ, 1ನೇ ಆರೋಪಿ ಮತ್ತು ಆಡಳಿತ ಮಂಡಳಿಯವರು ದಾಸ್ತಾನು ಪರಿಶೀಲನೆ ಮಾಡಿ ವರದಿಯನ್ನು ತಯಾರು ಮಾಡುತ್ತಾರೆ ಎಂದರೆ ಸರಿ. ಆದರೆ ದಾಸ್ತಾನಿನ ಫಿಜಿಕಲ್ ಪರಿಶೀಲನೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ದಿಃ 28.2.2017 ರಂದು ಸಹಕಾರ ಸಂಘದ ಮಾಸಿಕ ಸಭೆ ನಡೆದಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದರೆ ಪ್ರತಿ ತಿಂಗಳು ಮಾಸಿಕ ಸಭ ನಡೆಯುತ್ತದೆ ಎಂದರೆ ಸಾಕ್ಷಿ ಸರಿ ಎಂದು ನುಡಿಯುತ್ತಾರೆ.

ದಿಃ 28.2.2017 ರಂದು ಚಾಸಾ-2 ಮತ್ತು ಆರೋಪಿ 1 ರವರು ದಾಸ್ತಾನು ಪರಿಶೀಲನೆ ಮಾಡಿ ಸರಿ ಇದೆ ಎಂದು ವರದಿಯನ್ನು ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ.

ನಮ್ಮ ಬ್ಯಾಂಕಿನ ಕೃಷಿ ಸಹಕಾರ ಪತ್ತಿನಲ್ಲಿ ಆಗಿರುವ ರಸಗೊಬ್ಬರ, ಕರಿಮೆಣಸು ಆಗಿರುವ ಖೋತಗಳ ಬಗ್ಗೆ ಬ್ಯಾಂಕಿನ ಅಧ್ಯಕ್ಷರು, ಆಡಳಿತ ಮಂಡಳಿಯವರು ಮತ್ತು ಚಾಸಾ-2 ರವರು ಹೊಣೆಗಾರರು ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-35 ದಾಖಲೆಯು ಚಾಸಾ-1 ರವರು ಪುಕಾರು ನೀಡುವ ಸಮಯದಲ್ಲಿ ಚಾಸಾ-1 ರವರ ಸುಪರ್ದಿಯಲ್ಲಿ ಇತ್ತು ಎಂದರೆ ಸರಿ. ನನ್ನ ಒಂದು ವರದಿಯ ಆಧಾರದ ಮೇಲೆ ನಿಪಿ-1 ನ್ನು ನೀಡಿದ್ದು ಎಂದರೆ ಸರಿ. ಪುಕಾರು ದಾಖಲು ಮಾಡಿದ ಸಮಯದಲ್ಲಿ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಅದೇ ರೀತಿಯಾಗಿ ನನ್ನಿಂದ ಯಾವುದೇ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ದಾಖಲಿಸಿರುವ ಆರೋಪಿ ಪಟ್ಟಿಯಲ್ಲಿ ಸಾಕ್ಷಿದಾರನಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಸಾಕ್ಷಿ ಹೇಳುವಂತೆ ಪೋಲೀಸರು ನನಗೆ ಮಾಹಿತಿಯನ್ನು ನೀಡಿರುತ್ತಾರೆ. ನನಗೆ ಪೋಲೀಸರು ಸಾಕ್ಷಿ ಹೇಳಲು ತಿಸಿದ ನಂತರ ನಿಪಿ-35ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-35 ಕ್ಕೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ಪೋಲೀಸರು ಸಾಕ್ಷಿ ಹೇಳಲು ಹೇಳಿದ ನಂತರ ನಿಪಿ-35ನ್ನು ಸೃಷ್ಟಿ ಮಾಡಿರುವ ಕಾರಣ ಅದನ್ನು ಚಾಸಾ-1 ರವರು ಪುಕಾರು ನೀಡುವ ಸಮಯದಲ್ಲಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕಿನವರು ದಾಸ್ತಾನು ದುರುಪಯೋಗ ಮಾಡಿಕೊಂಡಿರುವ ಬಗ್ಗೆ ನನಗೆ ಮಾಹಿತಿ ಇದ್ದರೂ ಕೂಡ ನಮ್ಮ ಬ್ಯಾಂಕಿನವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಅದರ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಖೋತಾ ಆಗಿರುವ ಕರಿಮೆಣಸನ್ನು ಚಾಸಾ-2 ರವರಿಂದ ವಸೂಲಿಯಾಗುವುದನ್ನು

ತಪ್ಪಿಸಲು ನಿಪಿ-35 ನ್ನು ತಯಾರಿಸಿ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

Sd/-XXX

**(ಕೋನಪ್ಪ ಎನ್.ವಿ.)**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ವಿರಾಜಪೇಟೆ